**ಸಿ.ಸಿ . ನಂಃ 1021/2021**

**ಪಿ.ಡಬ್ಲ್ಯೂಃ 2**

ದಿನಾಂಕಃ 16-04-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್. ಸಿ. ಜಿ. ವಕೀಲರಿಂದಃ –**

4. ದಿನಾಂಕ 15.12.2020 ರಂದು ಸುಮಾರು 10.00 ಗಂಟೆಗೆ ನಾನು ನಮ್ಮ ಮನೆಯಲ್ಲಿ ಇದ್ದೆ. ಪಿರ್ಯಾದುದಾರರ ಮನೆಗೆ ನಮ್ಮ ಮನೆಯಿಂದ ಸುಮಾರು 10 ನಿಮಿಷಗಳಲ್ಲಿ ತಲುಪಬಹುದು. ಸಂಜೆ 7.30 ರ ಸುಮಾರಿಗೆ ನಾನು ಪಿರ್ಯಾದುದಾರ ಮನೆಗೆ ಹೋಗಿರುತ್ತೇನೆ. ಅವರು ಪೋನ್ ಮಾಡಿ ನನ್ನನ್ನು ಕರೆಸಿಕೊಂಡಿರುತ್ತಾರೆ. ಆ ಕಾಲಕ್ಕೆ ಪಿರ್ಯಾದುದಾರರು ಹಾಗೂ ಫ್ರಾಸಾ-3 ರವರು ಹಾಜರಿದ್ದರು. ನಾನು ಹೋದ ನಂತರ ಫ್ರಾಸಾ-3 ರವರು 15 ನಿಮಿಷಗಳ ನಂತರ ಬಂದಿರುತ್ತಾರೆ. ನಾನು ಹೋಗುವ ಮುನ್ನವೇ ಆರೋಪಿ ಅಲ್ಲಿದ್ದರು. ಆರೋಪಿಯೊಂದಿಗೆ ಬೇರೆ ಯಾರು ಇರಲಿಲ್ಲ. ಆ ಕಾಲಕ್ಕೆ ಯಾವುದೇ ದಾಖಲೆಗಳನ್ನು ಬರವಣಿಗೆ ಮಾಡಿಸಿರುವುದಿಲ್ಲ. ನನ್ನ ಸಮಕ್ಷಮ ವ್ಯವಹಾರ ಆಗಿದೆ ಎನ್ನುವುದರ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಪಿರ್ಯಾದುದಾರರು ಹಾಜರು ಪಡಿಸಿರುತ್ತಾರೆ.

5. ಪಿರ್ಯಾದುದಾರರು ನನ್ನ ಅಳಿಯ ಎಂದರೆ ಸರಿ. ಪಿರ್ಯಾದುದಾರರ ಹೆಂಡತಿ ಭಾರತಿ, ನನ್ನ ಮಗ ಪರಮೇಶನ ಹೆಂಡತಿ ಶಾಂತಾ ಹಾಗೂ ಶಿವರಾಜ ಎಂಬುವವರ ಹೆಂಡತಿ ಪ್ರಿಯಾಂಕ ರವರು ಒಟ್ಟಿಗೆ ಸೇರಿ ರಾಣೇಬೆನ್ನೂರಿನಲ್ಲಿ ಸಮೃದ್ಧಿ ಎಂಟರ್ ಪ್ರೈಸಸ್ ನನ್ನು ನಡೆಸುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ಎಲ್ಲಾ ವಿಚಾರ ತಿಳಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಹಾರ ನಡೆದಿದೆ ಎನ್ನಲಾದ ದಿನ ಪಿರ್ಯಾದುದಾರ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವ್ಯವಹಾರ ನಡೆಯದ ಕಾರಣ ಯಾವುದೇ ದಾಖಲೆಗಳನ್ನು ಬರವಣಿಗೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಿರ್ಯಾದುದಾರರು ಆರೋಪಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಹಾಗೆಯೇ ಆರೋಪಿಯು ಪಿರ್ಯಾದುದಾರರಿಂದ ಯಾವುದೇ ಹಣ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧ ಆರೋಪಿಯು ನಿಪಿ-1 ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ನನ್ನ ಅಳಿಯ ಆಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ತೆ.ನ್ಯಾ.ದಲ್ಲಿ ಬೆ. ಮಾಡಲಾಯಿತು.

ನನ್ನ ಸಮಕ್ಷಮ

ಓ.ಹೇ.ಕೆ.ಸರಿ ಇದೆ.

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು